# ಹಿಂದೂಸ್ಥಾನಿ ತಾಳವಾದ್ಯ ಜೂನಿಯರ್ ಗ್ರೇಡ್

## ಪರಿವಿಡಿ ಪ್ರಥಮ ವರ್ಷ


| ಕ್ರಮ ಸಂಖ್ಯೆ ಅಧ್ಯಾಯಗಳು | ಪುಟ ಸಂಖ್ಯೆ |
|---|---|
| ೧ ] ತಬಲಾದ ಪ್ರಥಮ ಅಕ್ಷರಗಳು.<br>ಭಾಗ -೧ , ಭಾಗ – ೨ | ೨ |
| ೨ ] ದಾದ್ರ ತಾಳದ ಪರಿಚಯ ಹಾಗೂ ೪ ಬದಲ್ ಠೇಕಗಳು. | ೩ |
| ೩ ] ಕೆಹರವ ತಾಳದ ಪರಿಚಯ ಹಾಗೂ ೪ ಬದಲ್ ಠೇಕಗಳು. | ೪-೫ |
| ೪ ] ತೀನ್ ತಾಳದ ದಿಲ್ಲಿಕಾಯ್ದ. | ೬-೭ |
| ೫ ] ತೀನ್ ತಾಳದ ಪರಿಚಯ ಹಾಗೂ ೪ ಬದಲ್ ಠೇಕಗಳು. | ೮-೯ |
| ೬ ] ತೀನ್ ತಾಳದ ತಿಹಾಯಿ ೪ ಪ್ರಕಾರಗಳು. | ೧೦ |
| ೭ ] ತೀನ್ ತಾಳದ ಪೂರಬ್ ಕಾಯ್ದ ೭ ಪ್ರಕಾರಗಳು. | ೧೧–೧೨ |


## ಶಾಸ್ತ್ರ ಪರಿಚಯ


| | |
|---|---|
| ೧ ] ತಬಲಾದ ಮತ್ತು ಡಗ್ಗಾಗಳ ಚಿತ್ರ [ ರಚನೆ ] ಬಿಡಿಸಿ ಅದರ ಅಂಗಗಳನ್ನು<br>ಗುರುತಿಸಿ ಬರೆಯುವುದು. | ೧೩ |
| ೨ ] ಪಾರಿಭಾಷಿಕ ಶಬ್ದಗಳು.<br>೧ ] ವಾದನ ೨] ತಾಳ ೩] ಲಯ ೪] ಮಾತ್ರ ೫] ಠೇಕಾ ೬] ಪೆಟ್ಟು ೭] ಹುಸಿ | ೧೪ |
| ೩ ] ತಬಲಾ ವಾದ್ಯದ ಸಂಕ್ಷಿಪ್ತ ಇತಿಹಾಸ. | ೧೫ |

# ಪ್ರಾಯೋಗಿಕ ಪಠ್ಯಕ್ರಮ
# ೧. ತಬಲದ ಪ್ರಥಮ ಅಕ್ಷರಗಳು

**ಭಾಗ – ೧**

**೧ ] ತಿಟ |** **[** ಎರಡು ಅಕ್ಷರಗಳು **]**

**೨ ] ಕತಿಟ ।** **[** ಮೂರು ಅಕ್ಷರಗಳು **]**

**೩ ] ಧಿತಿಟ ।** **[** ಮೂರು ಅಕ್ಷರಗಳು **]**

**೪ ] ತೊಂತಿಟ ।** **[** ಮೂರು ಅಕ್ಷರಗಳು **]**

**೫ ] ನತಿಟ ।** **[** ಮೂರು ಅಕ್ಷರಗಳು **]**

**ಭಾಗ – ೨**

**೧ ] ಕೆಕೆತಿಟ** **[** ನಾಲ್ಕು ಅಕ್ಷರಗಳು **]**

**೨ ] ಗೆಗೆತಿಟ** **[** ನಾಲ್ಕು ಅಕ್ಷರಗಳು **]**

**೩ ] ನನತಿಟ**] **[** ನಾಲ್ಕು ಅಕ್ಷರಗಳು **]**

**೪ ] ತಿರಕಿಟ** **[** ನಾಲ್ಕು ಅಕ್ಷರಗಳು **]**

**೬ ] ನ+ಗೆ=ಧಾ** **[** ಜೋಡ್ ಅಕ್ಷರಗಳು **]**

೧೦ ] **ಧಾಧಾ ತಾತಾ [** ಜೋಡ್ ಅಕ್ಷರಗಳು **]**

# ೨. ತಾಳ ದಾದ್ರ ಪರಿಚಯ ಹಾಗೂ ತಾಳಲಿಪಿ ಪದ್ಧತಿ

ಮಾತ್ರ – ೬

ಭಾಗ – ೨ [೩ ,೩] ಮಾತ್ರಗಳಂತೆ

೧ ನೇ ಮಾತ್ರದ ಮೇಲೆ ಸಮ್

೪ ನೇ ಮಾತ್ರದ್ ಮೇಲೆ ಹುಸಿ

| | | | | | | | | |
|---|---|---|---|---|---|---|---|---|
| ಮಾತ್ರ– | ೧ | ೨ | ೩ | । | ೪ | ೫ | ೬ | । |
| ಠೇಕಾ – | ಧಾ | ಧಿ | ನ | । | ಧಾ | ತಿ | ನ | । |
| ಚಿಹ್ನೆ – | * | | | । | ೦ | | | । |

ಈ ತಾಳವನ್ನು ಸುಗಮ ಸಂಗೀತ ಉಪಯೋಗಿಸುತ್ತಾರೆ. ತೀಸ್ರ ಜಾತಿ ತಾಳವಾಗಿದೆ.

### ದಾದ್ರತಾಳದ ೪ ಬದಲ್ ಠೇಕಾಗಳು [ ಪ್ರಕಾರಗಳು ]

| | | | | | | | | |
|---|---|---|---|---|---|---|---|---|
| ೧ ] | ೧ | ೨ | ೩ | । | ೪ | ೫ | ೬ | । |
| | ಧಾ | ಧಿ | <u>ನನ</u> | । | ಧಾ | ತಿ | <u>ನನ</u> | । |
| ೨ ] | ೧ | ೨ | ೩ | । | ೪ | ೫ | ೬ | । |
| | ಧಾ | ಧಿ | <u>ನತಿ</u> | । | ಧಾ | ತಿ | <u>ನತಿ</u> | । |
| ೩ ] | ೧ | ೨ | ೩ | । | ೪ | ೫ | ೬ | । |
| | ಧಾ | ಧಿ | <u>ನಕ</u> | । | ಧಾ | ತಿ | <u>ನಕ</u> | । |
| ೪ ] | ಧಾ | ತಿರ | ಕಿಟ | । | ತಾ | ಧಿ | ನ | । |

## ೩. ತಾಳ – ಕೆಹರವ ಪರಿಚಯ ಹಾಗೂ ತಾಳಲಿಪಿ ಪದ್ದತಿ

ಮಾತ್ರ - ೮

ಭಾಗ – ೨

೧ ನೆ ೀ ಮಾತ್ರದ ಮೇಲೆ ಸಮ್

೫ ನೇ  ಮಾತ್ರದ ಮೇಲೆ ಹುಸಿ

ಪೆಟ್ಟು -೧

ಹುಸಿ -೧

ತಾಳಲಿಪಿ ಪದ್ಧತಿ

| | | | | | | | | | | |
|---|---|---|---|---|---|---|---|---|---|---|
| ಮಾತ್ರ | – | ೧ | ೨ | ೩ | ೪ | । | ೫ | ೫ | ೭ | ೮ | । |
| ಠೇಕಾ | – | ಧಾ | ಗೆ | ನ | ತಿ | । | ನ | ಕ | ಧಿ | ನ | । |
| ಚಿಹ್ನೆ | – | * | | | | । | ೦ | | | | । |

**ಈ ತಾಳವನ್ನು ಸುಗಮ ಸಂಗೀತ , ಠೂಮ್ರಿ ಗಾಯನದಲ್ಲಿ ಲಗ್ಗಿಗಳನ್ನು, ಸಿನಿಮ ಸಂಗೀತ ಹಾಗೂ ಜಾನಪದ ಸಂಗೀತಕ್ಕೆ ಉಪಯೋಗಿಸುತ್ತಾರೆ.**

**ಇದು ಚತುಶ್ರ ಜಾತಿ ತಾಳವಾಗಿದೆ. [ ೪ ಮಾತ್ರಗಳು ]**

## ಕೆಹರವ ತಾಳದ ಬದಲ್ ಠೇಕಾಗಳು

### 1 ನೇ ಪ್ರಕಾರ

೧ ೨ ೩ ೪ | ೫ ೬ ೭ ೮ |

ಧಾ ಧಿ ನ ನ | ತಾ ಧಿ ನ ನ |

### ೨ ನೇ ಪ್ರಕಾರ

೧ ೨ ೩ ೪ | ೫ ೬ ೭ ೮ |

ಧಾ ಧಾ ತಿ ಟ | ತಾ ತಾ ಧಿ ನ |

### ೩ ನೇ ಪ್ರಕಾರ

೧ ೨ ೩ ೪ | ೫ ೬ ೭ ೮ |

ಧಾ ಧಾ ತಿರ ಕಿಟ | ತಾ ತಾ ಧಿ ನ |

* | ೦ |

### ೪ ನೇ ಪ್ರಕಾರ

೧ ೨ ೩ ೪ | ೫ ೬ ೭ ೮ |

ಧಾ ತಿ ತಾ ತಿ | ತಾ ತಿ ಧಾ ತಿ |

* | ೦ |

## ೪. ತೀನ್ ತಾಳದ ದಿಲ್ಲಿಕಾಯ್ದ

೧ ನೇ ಪ್ರಕಾರ [ ಪಲ್ಟಾ ]

ಧಾಧಾ ತಿಟ ಧಾಧಾ ತೊನಾ | ತಾತಾ ತಿಟ ಧಾಧಾ ಧಿನಾ |

೨ ನೇ ಪ್ರಕಾರ [ ಪಲ್ಟಾ ]

ಧಾಧಾ ತಿಟ ಧಾಧಾ ತಿಟ | ಧಾಧಾ ತಿಟ ಧಾಧಾ ತೊನಾ |

ತಾತಾ ತಿಟ ತಾತಾ ತಿಟ | ಧಾಧಾ ತಿಟ ಧಾಧಾ ಧಿನಾ |

೩ ನೇ ಪ್ರಕಾರ [ ಪಲ್ಟಾ ]

ಧಾಧಾ ತಿಟ ಧಾ - - | ಧಾಧಾ ತಿಟ ಧಾಧಾ ತೊನಾ |

ತಾತಾ ತಿಟ ತಾ - - | ಧಾಧಾ ತಿಟ ಧಾಧಾ ಧಿನಾ |

೪ ನೇ ಪ್ರಕಾರ [ ಪಲ್ಟಾ ]

ಧಾಧಾ ತಿಟ ಧಾ - - - | ಧಾಧಾ ತಿಟ ಧಾ - - - |

ಧಾಧಾ ತಿಟ ಧಾ - - - | ಧಾಧಾ ತಿಟ ಧಾಧಾ ತೊನಾ |

ತಾತಾ ತಿಟ ತಾ - - - | ತಾತಾ ತಿಟ ತಾ - - - |

ಧಾಧಾ ತಿಟ ಧಾ - - - | ಧಾಧಾ ತಿಟ ಧಾಧಾ ಧಿನಾ |

೫ ನೇ ಪ್ರಕಾರ [ ಪಲ್ಟಾ ]

ಧಾಧಾ ತಿಟ - ಧಾ ತಿಟ | ಧಾಧಾ ತಿಟ ಧಾಧಾ ತೊನಾ |

ತಾತಾ ತಿಟ - ತಾ ತಿಟ | ಧಾಧಾ ತಿಟ ಧಾಧಾ ಧಿನಾ |

೬ ನೇ ಪ್ರಕಾರ [ ಪಲ್ಟಾ ]

ಧಾಧಾ ತಿಟ - ಧಾ ತಿಟ | ಧಾಧಾ ತಿಟ - ಧಾ ತಿಟ |

ಧಾಧಾ ತಿಟ - ಧಾ ತಿಟ | ಧಾಧಾ ತಿಟ ಧಾಧಾ ತೊನಾ |

ತಾತಾ ತಿಟ - ತಾ ತಿಟ | ತಾತಾ ತಿಟ - ತಾ ತಿಟ |

ಧಾಧಾ ತಿಟ - ಧಾ ತಿಟ | ಧಾಧಾ ತಿಟ ಧಾಧಾ ಧಿನಾ |

೭ ನೇ ಪ್ರಕಾರ [ ಪಲ್ಟಾ ]

ಧಾಧಾ ತಿಟ - - ತಿಟ | ಧಾಧಾ ತಿಟ ಧಾಧಾ ತೊನಾ |

ತಾತಾ ತಿಟ - - ತಿಟ | ಧಾಧಾ ತಿಟ ಧಾಧಾ ಧಿನಾ |

೮ ನೇ ಪ್ರಕಾರ [ ಪಲ್ಟಾ ]

ಧಾಧಾ ತಿಟ - - ತಿಟ | ಧಾಧಾ ತಿಟ - - ತಿಟ |

ಧಾಧಾ ತಿಟ - - ತಿಟ | ಧಾಧಾ ತಿಟ ಧಾಧಾ ತೊನಾ |

ತಾತಾ ತಿಟ - - ತಿಟ | ತಾತಾ ತಿಟ - - ತಿಟ |

ಧಾಧಾ ತಿಟ - - ತಿಟ | ಧಾಧಾ ತಿಟ ಧಾಧಾ ಧಿನಾ |

## ತಿಹಾಯಿ

ಧಾಧಾ ತಿಟ ಧಾಧಾ ತೊನಾ ಧಾ - - -
ಧಾಧಾ ತಿಟ ಧಾಧಾ ತೊನಾ ಧಾ - - -
ಧಾಧಾ ತಿಟ ಧಾಧಾ ತೊನಾ ಧಾ .......

## ೫. ತೀನ್ ತಾಳ ಪರಿಚಯ ಹಾಗೂ ತಾಳಲಿಪಿ ಪದ್ದತಿ

**ಮಾತ್ರ – ೧೬**

**ಭಾಗ - ೪ ( ೪-೪-೪-೪ ) ರಂತೆ**

**೧ ನೇ ಮಾತ್ರದ ಮೇಲೆ ಸಮ್**

**೧ , ೫ , ೧೩ , ನೇ ಮಾತ್ರಗಳ ಮೇಲೆ ಪೆಟ್ಟು**

**೯ ನೇ ಮಾತ್ರದ ಮೇಲೆ ಹುಸಿ ,**

**ಪೆಟ್ಟು – ೩,**

**ಹುಸಿ – ೧**

| | | | | | | | | | | |
|---|---|---|---|---|---|---|---|---|---|---|
| **ಮಾತ್ರ -** | ೧ | ೨ | ೩ | ೪ | \| | ೫ | ೬ | ೭ | ೮ | \| |
| **ಠೇಕಾ -** | ಧಾ | ಧಿ | ಧಿ | ಧಾ | \| | ಧಾ | ಧಿ | ಧಿ | ಧಾ | \| |
| **ಚಿಹ್ನೆ -** | * | | | | \| | ೨ | | | | \| |
| **ಮಾತ್ರ -** | ೯ | ೧೦ | ೧೧ | ೧೨ | \| | ೧೩ | ೧೪ | ೧೫ | ೧೬ | \| |
| **ಠೇಕಾ -** | ಧಾ | ತಿ | ತಿ<br>O | ಧಾ | \| | ತಾ | ಧಿ | ಧಿ<br>೩ | ಧಾ | \| |

**ಈ ತಾಳವನ್ನು ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಕ್ಕೆ[ ಬಡಾಖ್ಯಾಲ್ ಹಾಗೂ ಛೋಟಖ್ಯಾಲ್ ] ಉಪಯೋಗಿಸುತ್ತಾರೆ.**

**ಇದು ಚತುಶ್ರ ಜಾತಿ [ ೪ ಮಾತ್ರ ] ತಾಳವಾಗಿದೆ.**

# ತೀನ್ ತಾಳದ ಬದಲ್ ಠೇಕಾಗಳು [ ೪ ಪ್ರಕಾರಗಳು ]

| | | | | | | | | |
|---|---|---|---|---|---|---|---|---|
| ೧ ] | ೧ | ೨ | ೩ | ೪ | ೫ | ೬ | ೭ | ೮ |
| | ಧಾ | ಧಿ | ಧಿ | ಧಧ | ಧಾ | ಧಿ | ಧಿ | ಧಧ |
| | * | | | | ೨ | | | |
| | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ |
| | ಧಾ | ತಿ | ತಿ | ತತ | ತಾ | ಧಿ | ಧಿ | ಧಧ |
| | ೦ | | | | ೩ | | | |

| | | | | | | | | |
|---|---|---|---|---|---|---|---|---|
| ೨ ] | ೧ | ೨ | ೩ | ೪ | ೫ | ೬ | ೭ | ೮ |
| | ಧಾ | ಧಿ | ಧಿ | ಧಾತಿ | ಧಾ | ಧಿ | ಧಿ | ಧಾತಿ |
| | * | | | | ೨ | | | |
| | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ |
| | ಧಾ | ತಿ | ತಿ | ತಾತಿ | ತಾ | ಧಿ | ಧಿ | ಧಾತಿ |
| | ೦ | | | | ೩ | | | |

| | | | | | | | | |
|---|---|---|---|---|---|---|---|---|
| ೩ ] | ೧ | ೨ | ೩ | ೪ | ೫ | ೬ | ೭ | ೮ |
| | ಧಾ | ಧಿ | ಧಿ | ನಕ | ಧಾ | ಧಿ | ಧಿ | ನಕ |
| | * | | | | ೨ | | | |
| | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ |
| | ಧಾ | ತಿ | ತಿ | ನಕ | ತಿಟ | ಧಿ | ಧಿ | ನಕ |
| | ೦ | | | | ೪ | | | |

| | | | | | | | | |
|---|---|---|---|---|---|---|---|---|
| ೪ } | ೧ | ೨ | ೩ | ೪ | ೫ | ೬ | ೭ | ೮ |
| | ಧಾ | ತಿಟ | ಧಿ | ಧಾ | ಧಾ | ತಿಟ | ಧಿ | ಧಾ |
| | * | | | | ೨ | | | |
| | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ |
| | ಧಾ | ತಿಟ | ತಿ | ತಾ | ತಿಟ | ಧಿ | ಧಿ | ಧಾ |
| | ೦ | | | | ೩ | | | |

## ೬ .ತೀನ್ ತಾಲದ ತಿಹಾಯಿಗಳು [ ೪ ಪ್ರಕಾರಗಳು }

### ೧ ನೇ ಪ್ರಕಾರ

ಧಾಧಾತಿಟ ತಾತಾತಿಟ ಧಾ --
ಧಾಧಾತಿಟ ತಾತಾತಿಟ ಧಾ --
ಧಾಧಾತಿಟ ತಾತಾತಿಟ ಧಾ
*

### ೨ ನೇ ಪ್ರಕಾರ

ಧಾಧಾಕತ ತಾತಾಕತ ಧಾ --
ಧಾಧಾಕತ ತಾತಾಕತ ಧಾ --
ಧಾಧಾಕತ ತಾತಾಕತ ಧಾ
*

### ೩ ನೇ ಪಕಾರ

ಗೆಗೆತಿಟ ಕೆಕೆತಿಟ ಧಾ --
ಗೆಗೆತಿಟ ಕೆಕೆತಿಟ ಧಾ --
ಗೆಗೆತಿಟ ಕೆಕೆತಿಟ ಧಾ --
*

### ೪ ನೇ ಪ್ರಕಾರ

ಧಾಧಾ ತಿರಕಿಟ ಧಾಧಾ ತೊನಾ ಧಾ --
ಧಾಧಾ ತಿರಕಿಟ ಧಾಧಾ ತೊನಾ ಧಾ --
ಧಾಧಾ ತಿರಕಿಟ ಧಾಧಾ ತೊನಾ ಧಾ --
*

# ೭ . ತೀನ್ ತಾಲದ ಪೂರಬ್ ಕಾಯ್ದ

## ೧ ನೇ ಪ್ರಕಾರ

ಧಾಧಾ ತಿರಕಿಟ ಧಾಧಾ ತೊನಾ | ತಾತಾ ತಿರಕಿಟ ಧಾಧಾ ಧಿನಾ |

## ೨ ನೇ ಪ್ರಕಾರ

ಧಾಧಾ ತಿರಕಿಟ ಧಾಧಾ ತಿರಕಿಟ | ಧಾಧಾ ತಿರಕಿಟ ಧಾಧಾ ತೊನಾ |

ತಾತಾ ತಿರಕಿಟ ತಾತಾ ತಿರಕಿಟ | ಧಾಧಾ ತಿರಕಿಟ ಧಾಧಾ ಧಿನಾ |

## ೩ ನೇ ಪ್ರಕಾರ

ಧಾಧಾ ತಿರಕಿಟ ಧಾ - - - | ಧಾಧಾ ತಿರಕಿಟ ಧಾಧಾ ತೊನಾ |

ತಾತಾ ತಿರಕಿಟ ತಾ - - - | ಧಾಧಾ ತಿರಕಿಟ ಧಾಧಾ ಧಿನಾ |

## ೪ ನೇ ಪ್ರಕಾರ

ಧಾಧಾ ತಿರಕಿಟ ಧಾ - - - | ಧಾಧಾ ತಿರಕಿಟ ಧಾ - - -|

ಧಾಧಾ ತಿರಕಿಟ ಧಾ - - -| ಧಾಧಾ ತಿರಕಿಟ ಧಾಧಾ ತೊನಾ |

ತಾತಾ ತಿರಕಿಟ ತಾ- - - | ತಾತಾ ತಿರಕಿಟ ತಾ - - - |

ಧಾಧಾ ತಿರಕಿಟ ಧಾ - - - | ಧಾಧಾ ತಿರಕಿಟ ಧಾಧಾ ಧಿನಾ |

## ೫ ನೇ ಪ್ರಕಾರ

ಧಾಧಾ ತಿರಕಿಟ - ಧಾ ತಿರಕಿಟ | ಧಾಧಾ ತಿರಕಿಟ ಧಾಧಾ ತೊನಾ |

ತಾತಾ ತಿರಕಿಟ - ತಾ ತಿರಕಿಟ | ಧಾಧಾ ತಿರಕಿಟ - ಧಾ ತಿರಕಿಟ |

## ೬ ನೇ ಪ್ರಕಾರ

ಧಾಧಾ ತಿರಕಿಟ - ಧಾ ತಿರಕಿಟ | ಧಾಧಾ ತಿರಕಿಟ - ಧಾ ತಿರಕಿಟ |

ಧಾಧಾ ತಿರಕಿಟ - ಧಾ ತಿರಕಿಟ | ಧಾಧಾ ತಿರಕಿಟ ಧಾಧಾ ತೊನಾ |

ತಾತಾ ತಿರಕಿಟ - ತಾ ತಿರಕಿಟ | ತಾತಾ ತಿರಕಿಟ - ತಾ ತಿರಕಿಟ |

ಧಾಧಾ ತಿರಕಿಟ - ಧಾ ತಿರಕಿಟ | ಧಾಧಾ ತಿರಕಿಟ ಧಾಧಾ ಧಿನಾ |

## ತಿಹಾಯಿ

ಧಾಧಾ ತಿರಕಿಟ ಧಾಧಾ ತೊನಾ ಧಾ - - -

ಧಾಧಾ ತಿರಕಿಟ ಧಾಧಾ ತೊನಾ ಧಾ - - -

ಧಾಧಾ ತಿರಕಿಟ ಧಾಧಾ ತೊನಾ ಧಾ - - -

*

# ೧ . ಫಾರಿಭಾಷಿಕ ಶಬ್ದಗಳು

1. **ವಾದನ : ನುಡಿಸುವುದು ಎಂದರ್ಥ**

2. **ತಾಳ : ಈ ಶಬ್ದವು ತಲು ಶಬ್ದದ ಆಧಾರದಿಂದ ಬಂದಿದ್ದು, ತಲು ಎಂದರೆ ತಳಹದಿ ಎಂದಾಗುತ್ತದೆ. ನಿರ್ಧಿಷ್ಟ ಮಾತ್ರೆಗಳಿಂದೊಡಗೂಡಿದ ಖಂಡ, ಸಮ್, ಪೆಟ್ಟು, ಹುಸಿ ಆಧಾರದ ಮೇಲಿಂದ ರಚಿಸಲ್ಪಟ್ಟ ಸುಂದರವಾದ ತಬಲಾ ಶಬ್ದಗಳ ರಚನೆಗೆ ತಾಳವೆನ್ನುತ್ತಾರೆ. ಅಥವಾ ಗಾಯನ ವಾದನದಲ್ಲಿ ತಗಲುವ ಅವಧಿಗೆ ತಾಲ ಎಂದು ಕರೆಯುತ್ತಾರೆ.**

3. **ಲಯ : ಎರಡು ಮಾತ್ರಗಳು ವ್ಯತ್ಯಾಸವಾಗದಂತೆ ಸಮತೂಕವನ್ನು ಕಾಯ್ದುಕೊಳ್ಳುವುದಕ್ಕೆ ಅಂದರೆ ಸಮಾನವಾದ ಕಾಲಾವಕಾಶಕ್ಕೆ ಲಯ ಎಂದು ಕರೆಯುತ್ತಾರೆ.**

4. **ಮಾತ್ರ : ಒಂದು ಸೆಕೆಂಡಿನ ಪೂರ್ಣ ಅವಧಿಗೆ ಮಾತ್ರ ಎಂದು ಕರೆಯುತ್ತಾರೆ.**

5. **ಠೇಕಾ : ನಿರ್ದಿಷ್ಟ ಮಾತ್ರಗಳ ಗುಂಪಿಗೆ ಠೇಕಾ ಎಂದು ಕರೆಯುತ್ತಾರೆ.**

6. **ಪೆಟ್ಟು : ಕೈ ಯಲ್ಲಿ ತಾಳವನ್ನು ಹಾಕುವಾಗ ಅಘಾತ ಕೊಟ್ಟು ಹಾಕುವದಕ್ಕೆ ಪೆಟ್ಟು ಎಂದು ಕರೆಯುತ್ತಾರೆ ಅಥವಾ ಶಬ್ದಕ್ರಿಯೆಗೆ ಪೆಟ್ಟು ಎಂದು ಕರೆಯುತ್ತಾರೆ.**


7. **ಹುಸಿ : ನಿಶಬ್ದಕ್ರಿಯೆಗೆ ಹುಸಿ ಎಂದು ಕರೆಯುತ್ತಾರೆ.**

8. **ವಿಲಂಬಿತ್ ಲಯ : ಲಯವು ನಿಧಾನ ಗತಿಯಲ್ಲಿ ಚಲಿಸುದಕ್ಕೆ ವಿಲಂಬಿತ್ ಲಯ ಎಂದು ಕರೆಯುತ್ತಾರೆ.**

9. **ಮಧ್ಯಲಯ : ವಿಲಂಬಿತ್ ಲಯಕ್ಕಿಂತ ಎರಡು ಪಟ್ಟು ಜಾಸ್ತಿ, ದೃತ್ ಲಯಕ್ಕಿಂತ ಎರಡು ಪಟ್ಟು ಕಡಿಮೆ ಇರುವ ಲಯಕ್ಕೆ ಅಂದರೆ ಮಧ್ಯ ಸ್ಥಿತಿಯಲ್ಲಿ ಇರುವ ಲಯಕ್ಕೆ ಮಧ್ಯ ಲಯ ಎಂದು ಕರೆಯುತ್ತಾರೆ.**

**೧೦ .ದೃತ್ ಲಯ : ಅತಿ ವೇಗವಾಗಿ ಚಲಿಸುವ ಲಯಕ್ಕೆ ದೃತ್ ಲಯ ಎಂದು ಕರೆಯುತ್ತಾರೆ.**

# ೨ . ತಬಲಾ, ಡಗ್ಗಗಳ ಚಿತ್ರ ಹಾಗೂ ಭಾಗಗಳ ಗುರುತಿಸಿ, ಹೆಸರಿಸಿ



1) ಮುಚ್ಚಿಗೆ (ಪುಡಿ) (2 ರಿಂದ 5ರ ವರೆಗಿನ ಭಾಗಗಳು)
2) ಶ್ಯಾಹಿ ಕರಣೆ
3) ಲವ ಮೈದಾನ
4) ಕಿನಾರ (ಚಾಂಟಿ)
5) ಗಜರಾ (ಇಂಡಿ, ಜಡೆ)
6) ಬಾರ (ಬದ್ದಿ)
7) ಘಟ್ಟಿ (ಕಟ್ಟಿಗೆಯ ತುಂಡು)
8) ಖೋಡ (ಪಡಗಾ ಅಥವಾ ಹೊಳ)
9) ಗುಡರಿ (ತಳಭಾಗದ ಸಿಂಬೆ)
10) ಸಿಂಬೆ (ವಾದ್ಯವನ್ನು ಇಡಲು ಉಪಯೋಗಿಸುವ ವೃತ್ತಾಕಾರದ ಬಟ್ಟೆಯ ಒತ್ತು.)

## ೩ . ತಬಲಾ ವಾದ್ಯದ ಸಂಕ್ಷಿಪ್ತ ಇತಿಹಾಸ

“ಶ್ರುತಿರ್ಮಾತಾ ಲಯಃಪಿತಾ” ಎಂದು ನಮ್ಮ ಪ್ರಾಚೀನ ಸಂಗೀತಗಾರರು ಸ್ವರವನ್ನು ತಾಯಿಗೂ ಲಯವನ್ನು ತಂದೆಗೂ ಹೋಲಿಸಿದ್ದಾರೆ. ಈ ಹೇಳಿಕೆಯಿಂದ ಸಂಗೀತದಲ್ಲಿ ಸ್ವರ ಮತ್ತು ಲಯದ ಮಹತ್ವವು ನಮಗೆ ತಿಳಿದು ಬರುತ್ತದೆ. ತಾಳದ ಉಗಮದ ಬಗೆಗೆ ಅನೇಕ ಅಭಿಪ್ರಾಯಗಳಿವೆ. ಮೊದಲನೆಯದಾಗಿ ಶಿವನ ಡಮರುವಿನಿಂದ ತಾಳದ ಉತ್ಪತ್ತಿಯಾಗಿದೆ. ತಾಳವು “ ತಾಳವು ತಲು ಎಂಬ ಶಬ್ದದಿಂದ ಉತ್ಪತ್ತಿಯಾಗಿದೆ.  ಇಲ್ಲಿ ತಲು ಎಂದರೆ ತಳಹದಿ ಎಂದು ಅರ್ಥವಾಗುತ್ತಾದೆ. ಸಂಗೀತದ  ಎಲ್ಲ ರಚನೆಗಳು ತಾಳದ ಚೌಕಟ್ಟಿನಲ್ಲೇ ಬರುವುದರಿಂದ ತಳಹದಿ ಎಂಬ ಅರ್ಥ ಸಮರ್ಪಕವಾಗಿದೆ. ತಾಳ ವಾದ್ಯಗಳು ಅತ್ಯಂತ ಪ್ರಾಚೀನ ಕಾಲದಿಂದ ಭಾರತೀಯ ಸಂಗೀತದಲ್ಲಿ ’ಗಾಯನ, ವಾದನ, ನರ್ತನ’ ದೊಂದಿಗೆ ಬಳಕೆಯಲ್ಲಿವೆ. ಭೇರಿ, ದುರ್ದರ, ಡೋಲು, ನಗಾರಿ, ಮೃದಂಗ, ತ್ರಿಪುಷ್ಕರ, ಪಖಾವಾಜ್ ಇನ್ನೂ ಅನೇಕ ವಾದ್ಯಗಳ ಉಲ್ಲೇಖವಿದೆ. ಪಖಾವಾಜ್ ಮತ್ತು ಮೃದಂಗ ಇಂದಿಗೂ ಪ್ರಚಾರದಲ್ಲಿದೆ. ಸುಮಾರು ಮೂರು ನೂರು ವರುಷಗಳಿಂದ ಪ್ರಚಾರವಾಗುತ್ತಾ ಬಂದಿರುವ ’ತಬಲ’ ಈಗ ಹೆಚ್ಚು ಬಳಕೆಯಲ್ಲಿದೆ.

ತಬಲಾ ವಾದ್ಯದ ಆವಿಷ್ಕಾರದ ಬಗೆಗೆ ಅನೇಕ ಅಭಿಪ್ರಾಯಗಳಿವೆ. ಸಂಗೀತಜ್ ರಾದ ಅಮೀರ್ ಖುಸ್ರೋ ’ತಬಲಾ’ ಆವಿಷ್ಕಾರನೆಂದು ಅನೇಕ ವಿದ್ವಾಂಸರು ಅಭಿಪ್ರಾಯ . ತಬ್ಲೆ,”ತಬಾವ್ರೋಲ್” ಎಂಬ ಪಾರ್ಸಿ ಶಬ್ದದಿಂದ ಬಂದಿದ್ದು ಮೊಗಲರ ಕಾಲದಲ್ಲಿ ನಮ್ಮ ದೇಶಕ್ಕೆ ಬಂದಿರಬಹುದಾಗಿದೆ ಎಂದು ವಿಧ್ವಾಂಸರು ಅಭಿಪ್ರಾಯ.

ತಬಲಾ ಆವಿಷ್ಕಾರ ನಾಂದಿಯಾದ ವಾದ್ಯವಾವುದೆಂದರೆ ಪ್ರಾಚೀನ ಕಾಲದಲ್ಲಿ ಪ್ರಚಾರದಲ್ಲಿದ್ದ ತ್ರಿಪುಷ್ಕರ ವಾದ್ಯವೆಂದು ಹೇಳಬಹುದು. ತ್ರಿಪುಷ್ಕರದಲ್ಲಿ  ಮೂರು ವಾದ್ಯಗಲಿದ್ದು ೧. ಉರ್ಧ್ವಕ ೨. ಅಲಿಂಗ್ಯ ೩, ಅಂಕಿಕ.ಈ ಮೂರು ವಾದ್ಯಗಳಲ್ಲಿ ಕಾಲಕ್ರಮೇಣ ಪರಿರ್ವತನೆ ಹೊಮ್ದಿ , ೧೩ ನೇ ಶತಮಾನದವರಿಗೆ ಅಂಕಿಕವೊಂದೇ ಉಳಿದು [ ಅದು ಈಗಿನ ದಕ್ಷಿಣಾದಿಯ ಮೃದ್ಂಗ ] , ಅಂಕಿಕ ಗಾತ್ರದಲ್ಲಿ ಸ್ವಲ್ಪ ಬದಲಾವಣೆ ಹೊಂದಿ ಗಾಯನ ಶೈಲಿಯ ಬದಲಾವಣೆಗೆ ಅನುಸಾರವಾಗಿ ಪಖಾವಾಜ್ ಆವಿಷ್ಕಾರವಾಯಿತು. ಸುಮಾರು ೧೭ ಶತಮಾನದಲ್ಲಿ ಉಸ್ತಾದ್ ಸುದ್ದಾರ್ ಖಾನ್ ಡಾಡಿ ಎಂಬ ಪ್ರಸಿದ್ಧ ಪಖಾವಾಜ್ ವಾದಕನು ದೆಹಲಿಯಲ್ಲಿದ್ದನು. ಮತ್ತೊಬ್ಬ ಸು ಪ್ರಸಿದ್ಧ ಭಗವಾನ್ ದಾಸನ ಜೊತೆಗೆ ವಾದನ ಸ್ಪರ್ಧೆಯಲ್ಲಿ ಸುದ್ದಾರ್ ಖಾನ್ ಡಾಡಿ ಪರಾಜಿತನಾದನು. ಅಲ್ಲದೆ

ಪಖಾವಾಜ್ ನುಡಿಸುವುದನ್ನು ನಿಲ್ಲಿಸಿದನು. ಆದರೆ ಕಲೆಯ ಸೆಳೆತ ಆತನನ್ನು ಸುಮ್ಮನಿರಲು ಬಿಡಲಿಲ್ಲ. ಆಗ ಗಾಯನದ ಶೈಲಿಯಲ್ಲಿಯೂ ಸಹಿತ ಸಾಕಷ್ಟು ಪರಿವರ್ತನೆಯಾಯಿತು. ಇದನ್ನರಿತ ಡಾಡಿಯು ಪಖಾವಾಜ್ ಎಲ್ಲಾ ಬೋಲ್ ಗಳನ್ನು [ಮುಕ್ತ ಛಾಪು ತಬಲಾ ವಾದ್ಯಕ್ಕೆ ಅಳವಡಿಸಿ, ತಬಲಾ ಅವಿಷ್ಕಾರ ಮಾದಿದನೆಂದು ಹಲವು ವಿದ್ವಾಂಸರ ಅಭಿಪ್ರಾಯ.